ಹುಡುಕುತ್ತಾ ಬಂದಿದ್ದ ಮಾಯಣ್ಣ ಇಂದು ಕೊಲೆಗಾರನನ್ನೇ ಹುಡುಕುತ್ತಾ ಬಂದಿದ್ದ. ಮನೆಯ ಮುಂಬಾಗಿಲಿಗೆ ಬೀಗ ಹಾಕಿರಲಿಲ್ಲ. ಮುಚ್ಚಿದ್ದ ಬಾಗಿಲನ್ನು ಮೆಲ್ಲಗೆ ತಳ್ಳಲು ಅದು ಹಾಗೇ ತೆರೆದುಕೊಂಡಿತ್ತು. ಆದರೆ ಒಳಗೆ ಪೂರ್ತಿ ನಿಶ್ಯಬ್ದ. ಯಾರೂ ಇದ್ದಂತಿರಲಿಲ್ಲ. ಸಪ್ಪಳ ಮಾಡದೆ ಒಳಹೊಕ್ಕ ಮಾಯಣ್ಣನಿಗೆ ಒಂದು ವಿಚಿತ್ರ ವಾತಾವರಣದ ಅನುಭವವಾಗಿತ್ತು. ಧೂಪ, ಗಂಧದಕಡ್ಡಿಗಳ ಹೊಗೆ ಮತ್ತು ಸುಗಂಧ ದಟ್ಟವಾಗಿ ಹರಡಿಕೊಂಡಿತ್ತು. ಎಲ್ಲೆಡೆ ದೀಪ ಉರಿಯುತ್ತಿದ್ದವು. ಆದರೆ, ತೀರಾ ಮಂದ ಬೆಳಕಿನ ನೀಲಿ ದೀಪಗಳು. ಅದೊಂದು ಸುಮಾರು ನಲವತ್ತು ಅಡಿ ಉದ್ದ, ಹತ್ತು ಅಡಿ ಅಗಲದ ನೇರ, ಉದ್ದನೆಯ ಪಡಸಾಲೆ. ಪಡಸಾಲೆಯ ಕೊನೆಯಲ್ಲಿ ಅಡ್ಡಗೋಡೆ ಮತ್ತು ಅದಕ್ಕೊಂದು ಬಾಗಿಲು. ಒಳಗೆ ಶೌಚ ಮತ್ತು ಸ್ನಾನದ ಮನೆ. ಅಲ್ಲಿಯೂ ದೀಪ ಉರಿಯುತ್ತಿತ್ತು, ಅದರ ಬಾಗಿಲು ಅರ್ಧ ಮುಚ್ಚಿತ್ತು. ಪಡಸಾಲೆಯ ಕೊನೆಯ ಸುಮಾರು ಇಪ್ಪತ್ತು ಅಡಿಯಷ್ಟು ಅಡುಗೆ ಮನೆಯಂತಿದ್ದರೆ, ಮುಂದಿನ ಇಪ್ಪತ್ತಡಿಯಷ್ಟು, ಅಂದರೆ ಮುಂಬಾಗಿಲ ತನಕವೂ ಮುರುಗನ್‌ನ ಕೋಣೆಯ ತರ ಇತ್ತು. ಈ ಮುಂದಿನ ಭಾಗಕ್ಕೂ ಹಿಂದಿನ ಅಡುಗೆಮನೆ ಭಾಗಕ್ಕೂ ಮಧ್ಯೆ ಗೋಡೆಯೇನೂ ಇರಲಿಲ್ಲ. ಆದರೆ ಎರಡು ಭಾಗವನ್ನು ವಿಂಗಡಿಸುವಂತೆ, ಗಾರೆ ನೆಲದ ಮೇಲೆ, ಆ ಗೋಡೆಯಿಂದ ಈ ಗೋಡೆಯ ತನಕ, ಅಡ್ಡಲಾಗಿ ಸುಮಾರು ಗೇಣೆತ್ತರದ ಸಿಮೆಂಟು ಕಟ್ಟೆಯಿತ್ತಷ್ಟೆ.

ಅಡುಗೆ ಮನೆಯ ನಲ್ಲಿಯಿಂದ ನೀರು ಸಣ್ಣಗೆ ಸುರಿದು ಹೋಗುತ್ತಿತ್ತು. ಬಚ್ಚಲು ಮೋರಿ ಮುಚ್ಚಿ ಹೋಗಿತ್ತೋ ಏನೊ, ಹಾಗಾಗಿ ಇಡೀ ಅಡುಗೆ ಮನೆಯ ಭಾಗದ ನೆಲದ ಮೇಲೆ ಪಾದ ಮುಳುಗುವಷ್ಟು ನೀರು ನಿಂತಿತ್ತು. ಆ ಹಿಂದಿನ ಶೌಚ ಮತ್ತು ಸ್ನಾನದ ಮನೆ ಗೋಡೆಯ ಮೇಲೆ ದೊಡ್ಡ ದೊಡ್ಡದಾಗಿ ಕೆಂಪು ಸೀಮೆಸುಣ್ಣದಲ್ಲಿ ಏನೋ ಬರೆದಿತ್ತು. ಮಾಯಣ್ಣ ಇನ್ನಷ್ಟು ಮುಂದೆ ಹೋಗಿ ನೋಡಿದ.

'ಸಾರಿ ವಳ್ಳಿ ಬೇಬಿ, ಸಾರಿ ಕೋಕಿಲ, ಬೈ ಬೈ' ಎಂದು ಇಂಗ್ಲಿಷಿನಲ್ಲಿ ಬರೆದಿತ್ತು. ಅದರ ಪಕ್ಕದಲ್ಲಿಯೇ ಗೋಡೆಗೆ ಅಂಟಿಸಿದ ಒಂದು ಬಿಳಿ ಹಾಳೆಯಲ್ಲಿ ತಮಿಳಿನಲ್ಲಿ ಏನೋ ಬರೆದು ಕೆಳಗೆ ಸಹಿ ಹಾಕಿದಂತಿತ್ತು. ಬಹುಶಃ ಮರಣ ಪತ್ರವಿರಬಹುದೆ ಎಂಬ ಸಂದೇಹ ಬಂದಿತ್ತು. ಸ್ನಾನದ ಮನೆಯಲ್ಲಿ ಮುರುಗನ್ ಆತ್ಮಹತ್ಯೆ ಮಾಡಿಕೊಂಡಿರಬಹುದೆಂಬ ಶಂಕೆ ಬಲವಾಗಿ ಮೂಡಿತ್ತು. ಮಾಯಣ್ಣ ಅಡುಗೆಮನೆಯ ಮುಂಚಿನ ಸಿಮೆಂಟು ಕಟ್ಟೆಯ ಹೊರಗೆ ಶೂ ಬಿಟ್ಟು, ಮೆಲ್ಲಗೆ ಅಡುಗೆ ಮನೆಯ ತುಂಬಕ್ಕೂ ನೀರು ನಿಂತ ನೆಲದ ಮೇಲೆ, ಎಚ್ಚರಿಕೆಯಿಂದ ಹೆಜ್ಜೆಯಿಡುತ್ತಾ ಬಚ್ಚಲು ಮನೆಯ ಹೊಸಿಲ ಹೊರಗೇ ನಿಂತು, ಒಳಕ್ಕೆ ಇಣುಕಿ ನೋಡಲು ಅದು ಪೂರ್ತಿ ಖಾಲಿಯಿತ್ತು. ಎಲ್ಲವೂ ಒಂದು ರೀತಿ ನಿಗೂಢವಾಗಿದ್ದಂತಿತ್ತು. ಅದೇಕೊ ಮನೆಯಲ್ಲಿ ಯಾರೊ ಇದ್ದಾರೆ ಎಂದು ಭಾಸವಾಗುತ್ತಿತ್ತು. ಕೈ ಮೆಲ್ಲನೆ ಬೆಲ್ಟಿಗೆ ಕಟ್ಟಿದ ಗನ್ ಹೋಲ್ಡರ್ ಮೇಲೆ ಹೋಗಿ, ಚಕ್ಕನೆ ಹಿಂದಕ್ಕೆ ತಿರುಗಿ ನೋಡಲು, ಬೆಚ್ಚಿ ಬೀಳುವಂತಹ ದೃಶ್ಯವೊಂದು ಕಾದಿತ್ತು.

ಅಮ್ಮು ಮನೆಗೆ ಆ ದಿನ ನಡುರಾತ್ರಿ, ನೇಲ್ ಕಟ್ಟರ್ ಸಾಕ್ಷಿ ಹುಡುಕಲು ಹೋಗಿದ್ದಾಗ ಕಂಡ ಅದೇ ಆಕೃತಿ, ಪೂರ್ತಿ ತೆರೆದ ಮುಂಬಾಗಿಲಿನಲ್ಲಿ ನಿಂತಿತ್ತು. ಪೌರ್ಣಮಿಯ ಬೆಳಗಿದ್ದ ಆಕಾಶದ ಹಿನ್ನೆಲೆಯಲ್ಲಿ, ಅದು ಕೇವಲ ಒಂದು ಆಕೃತಿಯಂತಷ್ಟೇ ಕಾಣುತ್ತಿತ್ತು. ಅದೇ ಕಪ್ಪು ನೀಳ ನಿಲುವಂಗಿ, ಕೂದಲು ಕೆಳಗೆ ಹರಡಿ ಇಳಿಬಿಟ್ಟ ಆಕೃತಿ. ಕೈಯಲ್ಲಿ ಅದೇನೋ ಹಿಡಿದು, ಬಾಗಿಲಲ್ಲೇ ನಿಂತು ತನ್ನನ್ನೇ ನಿಟ್ಟಿಸುತ್ತಿತ್ತು. ಧೃತಿಗೆಡದ ಮಾಯಣ್ಣ ಒಂದೆರಡು ಹೆಜ್ಜೆ ಮುಂದಿಕ್ಕಿ ಗನ್ ಹೊರಗೆ ತೆಗೆಯಲು ಪ್ರಯತ್ನಿಸುತ್ತಿದ್ದಂತೆ, ತನ್ನ ಇಡೀ ನರಮಂಡಲವನ್ನು ಸರಕ್ಕನೆ ದೇಹದಿಂದಲೇ ಕಿತ್ತು ಹೊರಗೆಳೆದು ಹಾಕಿದಂತಹ ಪ್ರಾಣಾಂತಿಕ ಆಘಾತವಾಗಿತ್ತು. ಒಂದೆರಡು ನಿಮಿಷಗಳೇ ಬೇಕಾಗಿತ್ತು ಮಾಯಣ್ಣನಿಗೆ ಚೇತರಿಸಿಕೊಳ್ಳಲು. ನೋವು, ಕೌತುಕ ತುಂಬಿದ ಕಣ್ಣಲ್ಲಿ ನಿಟ್ಟಿಸಿ ನೋಡುತ್ತಿದ್ದಂತೆ ಆ ಆಕೃತಿ ಮುಂದು ಮುಂದಕ್ಕೆ ಬಂದು ಗುರುತು ಹಿಡಿಯುವಷ್ಟು ಹತ್ತಿರಕ್ಕೆ ಬಂದು ನಿಂತಿತ್ತು. ಅದೇ ನೀಳ ನಿಲುವಂಗಿಯಂಥ ಕಪ್ಪು ದಿರಿಸು, ತಲೆಯ ಮೇಲೆ ಹಾಕಿದ ಕಪ್ಪು ಶಾಲು, ಭುಜದ ಮೇಲೆ ಇಳಿಬಿದ್ದು, ಬಾಚದೆ ಹಾಗೇ ಕೆಳಗೆ ಹರಡಿ ಇಳಿಬಿಟ್ಟ ಕೂದಲಿನಂತೆ ಕಾಣುತ್ತಿತ್ತು. ಕೈಗಳನ್ನು ಸಡಿಲವಾಗಿ ಕೆಳಗೆ ಜೋತುಬಿಟ್ಟು ನಿಂತಿದ್ದ ಆ ಆಕೃತಿ... ಮುರುಗನ್. ಬಲಗೈಯಲ್ಲಿ ಮುಂಬಾಗಿಲ ಹೊರಗಿನಿಂದ ಬಂದ ವೈರ್‌ಗೆ ಸಂಪರ್ಕಿಸಿದ ವಿದ್ಯುತ್ ಸ್ವಿಚ್.

'ಮಾಯಣ್ಣ, ಮುಗೀತು ಇವತ್ತು ನಿನ್ನ ತನಿಖೆ, ತರಲೆ ಎಲ್ಲಾ. ನೋಡು ಎಂಗೆ ನೀನೇ ಇಲ್ಲಿ ಬಂದು ನಿಲ್ಲಬೇಕು, ಅಂಗೆ ಐಡಿಯಾ ಆಕಿದ್ದೀನಿ. ನೀನು ನಿಂತಿದ್ದೀಯಲ್ಲ ನೀರು, ಅದಕ್ಕೆ ಕಂಪ್ಲೀಟಾಗಿ ಕರೆಂಟ್ ಕನೆಕ್ಷನ್ ಕೊಟ್ಟಿದ್ದೀನಿ. ಅದರಲ್ಲಿ ಎರಡು ಕೇಜಿ ಉಪ್ಪು ಆಕಿದ್ದೀನಿ. ಚೆನ್ನಾಗಿ ಕರೆಂಟ್ ಪಾಸ್ ಆಗ್ಬೇಕು ಅಲ್ವ... ಅದುಕ್ಕೆ ಅಲ್ಲಿ ಪೂರ್ತಿ ನೀರು ನಿಲ್ಸಿರೋದು. ಸ್ವಿಚ್ ನನ್ನ ಕೈಯಲ್ಲಿ ಇದೆ. ಬೇಕಾ ಇನ್ನೊಂದು ಸ್ಯಾಂಪಲ್ಲು?'

ಮತ್ತೆ ಮುರುಗನ್ ತನ್ನ ಕೈಯಲ್ಲಿದ್ದ ಸ್ವಿಚ್ ಅದುಮಲು ಮತ್ತೆ ಪ್ರಾಣವೇ ಹಾರಿ ಹೋದಂತಹ ಆಘಾತವಾಗಿತ್ತು ಮಾಯಣ್ಣನಿಗೆ.

'ಇದು ಮನೆ ಕರೆಂಟು ಅಲ್ಲ ಸಾರ್. ಫ್ಯಾಕ್ಟರಿ ಕರೆಂಟು... ತ್ರೀ ಫೇಸು. 440 ವೋಲ್ಟು'.

'ಇವಾಗ ನಾನು ಯೇಳಿದಂಗೆ ಕೇಳ್ಬೇಕು. ಏನೂ ಆಟ ಆಡ್ಬೇಡ. ಅಲ್ಲಿ ಹಿಂದೆ ಗೋಡೆಗೆ ವರಗಿ ನಿಂತುಕೊ. ಸ್ವಲ್ಪ ಮೂವ್ ಮಾಡುದ್ರೆ ಫುಲ್ ಒನ್ ಮಿನಿಟ್ ಕರೆಂಟ್ ಶಾಕ್ ಕೊಡ್ತೀನಿ ಗೊತ್ತಾಯ್ತಾ?'

ಮಾಯಣ್ಣನಿಗೆ ಈಗ ಅರ್ಥವಾಗಿತ್ತು. ಇದು ತನ್ನನ್ನು ಕೆಡವಲು ಬಹಳ ಚಾಣಾಕ್ಷತೆಯಿಂದ ತೋಡಿದ್ದ ಖೆಡ್ಡಾ ಎಂದು. ಅಲ್ಲದೆ ತನ್ನ ಬಗ್ಗೆ ತನಗೇ ಬೇಸರವಾಗಿತ್ತು, ಎಷ್ಟು ಸುಲಭವಾಗಿ ಯಃಕಶ್ಚಿತ್ ಒಬ್ಬ ಕ್ರಿಮಿನಲ್ ಕಟ್ಟಿದ ಆಟಕ್ಕೆ ಬೇಸ್ತು ಬಿದ್ದಿದ್ದೆ ಎಂದು. ವಿಧಿಯಿಲ್ಲದೆ ಶರಣಾದಂತೆ ಕೆಳಗೆ ಹಾಕಿದ ತಲೆಯನ್ನು ಅಡ್ಡಡ್ಡ ಆಡಿಸಿದ.

'ಈಗ ನಿನ್ನ ಆ ಗನ್ ಮೆಲ್ಲಗೆ ತೆಗಿ. ಸ್ಲೋ ಮೋಶನ್‌ನಲ್ಲಿ ನನ್ನ ಕಡೆ ಎಸಿ. ಅಂಗೆ ನಿನ್ನ ಮೊಬೈಲು ಎಸಿ. ಏನಾನ ಸ್ಟಂಟ್ ಮಾಡುದ್ರೆ ನನ್ನ ಕೈ ಸ್ವಿಚ್ ಮೇಲೇ ಇದೆ'.

ಮಾಯಣ್ಣನಿಗೆ ಅವನು ಹೇಳಿದಂತೆ ಮಾಡುವುದರ ಹೊರತು ಗತ್ಯಂತರವಿರಲಿಲ್ಲ. ಈಗ ಸನ್ನಿವೇಶ ಸಂಪೂರ್ಣವಾಗಿ ಮುರುಗನ್ ನಿಯಂತ್ರಣದಲ್ಲಿತ್ತು. ಎಡಗೈಯಲ್ಲಿ 440 ವೋಲ್ಟ್ ಕರೆಂಟ್ ಸ್ವಿಚ್ಚು, ಬಲಗೈಯಲ್ಲಿ ಲೋಡೆಡ್ ಗನ್ನು. ಮಾಯಣ್ಣ ಸದ್ಯಕ್ಕೆ ಅಸಹಾಯಕತೆಯಿಂದ ನಿಂತಿದ್ದ, ಆದರೆ ತಲೆಯಲ್ಲಿ ಲೆಕ್ಕಾಚಾರ ನಡೆಯುತ್ತಲೇ ಇತ್ತು. ಬಹುಶಃ, ಇದೇ ನನ್ನ ಕೊನೆಯ ದಿನವಾಗಿರಲೂಬಹುದೆಂಬ ಆತಂಕ, ದುಗುಡ ಮತ್ತೆ ಮತ್ತೆ ಮನಸ್ಸನ್ನು ಸುತ್ತುತ್ತಾ ಸುಳಿಯಾಗಿತ್ತು. ತನ್ನ ಎಳೆಕಂದ ಮತ್ತು ಹೆಂಡತಿ ಸೌಜನ್ಯಳ ನೆನಪುಗಳು ಒತ್ತರಿಸಿ ಬರತೊಡಗಿದವು. ಇನ್ನೊಂದೆಡೆ ಹೀಗೆ ಹಲುಬುತ್ತಾ ಅಳುಕುತ್ತಾ ಕೂತರೆ ತನ್ನ ಮನೋಸ್ಥೈರ್ಯ ಕುಗ್ಗಿ, ಎದುರಿಗಿದ್ದ ಕುತ್ತನ್ನು ಪರಿಣಾಮಕಾರಿಯಾಗಿ ಪ್ರತಿರೋಧಿಸಲಾಗದು ಎಂಬ ಅರಿವೂ ಇತ್ತು. ತನ್ನ ಲಯ ಲಕ್ಷ್ಯ ಅತ್ತಿತ್ತವಾಗದೆ ಪೂರ್ತಿಯಾಗಿ ವರ್ತಮಾನದಲ್ಲಿರಬೇಕೆಂದು ದೃಢಸಂಕಲ್ಪ ಮಾಡಿಕೊಂಡ ಮಾಯಣ್ಣ. ಒಂದು ರೀತಿಯ ವಿಕೃತ ಸಂತೋಷವನ್ನು ತುಂಬಿಕೊಂಡಿದ್ದ ಮುರುಗನ್ ಪೂರ್ತಿ ಆತ್ಮವಿಶ್ವಾಸದಿಂದ ಮುಂಬಾಗಿಲಿನ ಬದಿಗಿದ್ದ ಕುರ್ಚಿಯ ಮೇಲೆ ಕೂತು, ಕೋಟು ಜೇಬಿನಿಂದ ಸಿಗರೇಟು, ಲೈಟರ್, ಪೂರ್ತಿ ಬಾಟಲ್ ರಮ್, ಮತ್ತು ವಡೆ–ಬಜ್ಜಿ ಪೊಟ್ಟಣ ತೆಗೆದು ಮುಂದಿದ್ದ ಮೇಜಿನ ಮೇಲೆ ಇಟ್ಟ. ಮೇಜಿನ ಇನ್ನೊಂದು ಬದಿಗೆ ಕರೆಂಟ್ ಸ್ವಿಚ್ ಮತ್ತು ಗನ್. ಬಲಗೈ ಬೆರಳುಗಳು ಸ್ವಿಚ್‌ನ ಮೇಲೇ ಇದ್ದವು. ಮಾಯಣ್ಣನ ತಲೆ, ಈ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳುವ ತಂತ್ರಗಾರಿಕೆಯನ್ನು ಹೆಣೆಯುವುದರಲ್ಲಿ ತೊಡಗಿತ್ತು.

ಗೋಡೆಗೆ ಒರಗಿ ತಾನು ನಿಂತಲ್ಲಿಂದ ಇಪ್ಪತ್ತಡಿ ದೂರದ ಈ ಕರೆಂಟು ಕೊಳದಂಚಿನ ಕಟ್ಟೆಯನ್ನು ಸುರಕ್ಷಿತವಾಗಿ ದಾಟಿ ಹೋದರೆ, ಅವನು ಅರ್ಧದಷ್ಟು ನಿರಾಯುಧನಾಗುತ್ತಾನೆ, ಅಲ್ಲಿಗೆ ಅವನ ಕರೆಂಟು ಸ್ವಿಚ್ ಕೆಲಸಕ್ಕೆ ಬರುವುದಿಲ್ಲ, ಇನ್ನು ನಿವಾರಿಸಿಕೊಳ್ಳಲು ಉಳಿಯುವುದು ಗನ್ನಷ್ಟೆ. ಮುರುಗನ್ ಪೂರ್ತಿ ಬಾಟಲ್ ಮುಂದಿಟ್ಟುಕೊಂಡಿರುವುದು ನೋಡಿದರೆ, ಒಂದು ನಾಲ್ಕು ಪೆಗ್ಗಾದರೂ ಒಳಕ್ಕೆ ಸುರಿದುಕೊಳ್ಳುವ ಸಾಧ್ಯತೆಯಿತ್ತು. ಅಲ್ಲದೆ ರಮ್ ಲೋಟ, ನೀರಿನ ಬಾಟಲಿ, ಸಿಗರೇಟು, ವಡೆ ಬಜ್ಜಿ ಇವೆಲ್ಲವನ್ನೂ ನಿಭಾಯಿಸಬೇಕಿದ್ದ ಅವನ ಕೈಗಳು, ಕೆಲವೇ ಕ್ಷಣಗಳಾದರೂ ಸ್ವಿಚ್ ಮತ್ತು ಗನ್ನುಗಳಿಂದ ದೂರವಾಗಿ, ತನಗೆ ಅವಕಾಶದ ಕಿಂಡಿಗಳು ತೆರೆಯಬಹುದೇನೊ ಎನಿಸಿತ್ತು. ಮಾಯಣ್ಣನ ತಲೆ ಗರಗರ ತಿರುಗುತ್ತಿತ್ತು, ಮುರುಗನ್‌ನ ಗಮನ ಮಂದವಾಗಿ ತನಗೆ ಒದಗಿ ಬರಬಹುದಾದ ಅವಕಾಶಗಳ ಬಗ್ಗೆ. ಸಂದರ್ಭ ಸನ್ನಿವೇಶಗಳು ತೀರಾ ತಮ್ಮ ಪರವಾಗಿದ್ದಾಗ, ಶತ್ರುಗಳನ್ನು, ಕುತ್ತುಗಳನ್ನು